# ನವಿಲು ಕಾಳಗ!

■ ಸುನೀಲ್ ಬಾರ್ಕೂರ್
ಚಿತ್ರ: ಹರೀಶ ಕೂಳೂರು



ಕೆರವಾಡಿ ಕೆರೆ ದಡದಲ್ಲಿ ಹಕ್ಕಿಯೊಂದರ ಕರ್ಕಷ ಧ್ವನಿ ಕೇಳಿಸಿತು. ಹತ್ತಿರ ಹೋಗಿ ನೋಡಿದರೆ ಅಲ್ಲಿ ನಮಗೆ ಕಂಡಿದ್ದು ಗರಿ ಬಿಚ್ಚಿ ನರ್ತಿಸುತ್ತಿದ್ದ ನವಿಲು. ಪೂರ್ತಿ ಜೋಶ್‌ನಲ್ಲಿದ್ದಂತೆ ಕಂಡು ಬಂದ ನವಿಲು ಸುಮಾರು ಹೊತ್ತು ನರ್ತಿಸುತ್ತಲೇ ಇತ್ತು. ಈ ನೃತ್ಯಪ್ರದರ್ಶನಕ್ಕೆ ನಮ್ಮೊಡನೆ ಇನ್ನೋರ್ವ ಪ್ರೇಕ್ಷಕನ ಆಗಮನವಾಯ್ತು. ಅದೂ ಇನ್ನೊಂದು ಗಂಡು ನವಿಲು, ಆಗಷ್ಟೇ ಗರಿಗಳು ಮೂಡುತ್ತಿರುವ ಮರಿ ಬೇರೆ. ಆಗಲೇ ಈ ಕಥೆಗೊಂದು ಟ್ವಿಸ್ಟ್ ಸಿಕ್ಕಿದ್ದು.

ತನ್ನ ನೃತ್ಯವನ್ನು ಮೊಟಕುಗೊಳಿಸಿದ ಗಂಡು ನವಿಲು, ಆ ಎಳೆ ಗಂಡು ನವಿಲನ್ನು ದುರುಗುಟ್ಟಿ ನೋಡುತ್ತಿದ್ದಂತೆಯೇ ರೌದ್ರಾವತಾರ ತಾಳಿತು. ನಾಟ್ಯವೇದಿಕೆ ಕುಸ್ತಿಅಖಾಡವಾಗಿ ಮಾರ್ಪಟ್ಟಿತ್ತು. ಗಾಳಿಯಲ್ಲಿ ಹಾರಿ ಹಾರಿ ಈ ನವಿಲು ತನ್ನ ಕೊಕ್ಕಿನಿಂದ ಏಟುಗಳನ್ನು ಕೊಡುತ್ತಿದ್ದರೆ ಅತ್ತ ಎಳೆ ನವಿಲೂ ಸಹ ತಾನೇನೂ ಕಮ್ಮಿಯಿಲ್ಲವೆಂಬಂತೆ ಎದುರೇಟು ನೀಡುತ್ತಿತ್ತು.



ಜೊತೆಗದಕ್ಕೆ ದೊಡ್ಡ ಗರಿಗಳಿಲ್ಲದಿರುವ ಅನುಕೂಲ ಬೇರೆ. ಸುಮಾರು ಮುಕ್ಕಾಲು ಘಂಟೆ ಕಾಲ ನಡೆದ ಈ ಜಿದ್ದಾಜಿದ್ದಿಯಲ್ಲಿ ಕೊನೆಗೆ ಎರಡೂ ಹಕ್ಕಿಗಳು ಸುಸ್ತಾಗಿ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ನಿರ್ಧರಿಸಿ, ತಂತಮ್ಮ ಮನೆಯತ್ತ ನಡೆದವು.

ನವಿಲಿನ ನರ್ತನದ ಬಗ್ಗೆ ತಿಳಿದಿದ್ದರೂ ಈ ಕುಸ್ತಿ ಕೌಶಲ್ಯದ ಬಗ್ಗೆ ಗೊತ್ತಿರಲಿಲ್ಲ. ಅಷ್ಟಕ್ಕೂ ಈ ನವಿಲುಗಳು ಏಕೆ ಕಾದಾಡುತ್ತವೆ? ಹುಲಿ, ಸಿಂಹದಂತಹ ಕಾಡು ಪ್ರಾಣಿಗಳು ತಮ್ಮ ವ್ಯಾಪ್ತಿ ಪ್ರದೇಶವನ್ನು ಗುರುತಿಸಿಕೊಳ್ಳುವ ಹಾಗೆ ನವಿಲುಗಳಲ್ಲಿಯೂ ಅಂಥದೊಂದು ವಿಶೇಷ ಇದೆ. ತನ್ನ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಹೆಣ್ಣು ನವಿಲಿರುವುದನ್ನು ಇಷ್ಟಪಡುವ ಗಂಡುನವಿಲು ಅದಕ್ಕೆ ವಿರುದ್ಧವಾಗಿ ಬೇರೆ ಗಂಡು ನವಿಲಿನ ಇರುವಿಕೆಯನ್ನು ಸಹಿಸುವುದಿಲ್ಲ. ಜಾಗತಿಕವಾಗಿ ನವಿಲಿನ ಈ ಮನೋಭಾವ ಪ್ರಾಣಿ ಸಂಗ್ರಹಾಲಯಗಳಲ್ಲಿ ದೊಡ್ಡ ತಲೆಬೇನೆ. ಇಂಗ್ಲೆಂಡಿನ ಸರ್ರೆಯಲ್ಲಂತೂ ಇದೊಂದು ದೊಡ್ಡ ತಲೆನೋವು. ಹೆಚ್ಚಿನ ಸಂಖ್ಯೆಯಲ್ಲಿ ನವಿಲಿರುವ ಆ ಪ್ರದೇಶದಲ್ಲಿ ಐಶಾರಾಮಿ ಕಾರುಗಳನ್ನು ಕೊಂಡೊಯ್ದರೆ ಫಜೀತಿಯೇ. ನಿಲ್ಲಿಸಿರುವ ಕಾರಿನ ಬಳಿ ಬರುವ ನವಿಲುಗಳು ಪಳಪಳ ಹೊಳೆಯುವ ಕಾರಿನ ಮೇಲೆ ತಮ್ಮ ಪ್ರತಿಫಲನವನ್ನು ನೋಡಿ ಇನ್ನೊಂದು ಗಂಡು ನವಿಲು ಎಂದು ತಪ್ಪು ತಿಳಿದುಕೊಂಡು ಕಾರಿನ ಮೇಲೆ ದಾಳಿ ನಡೆಸುವುದಿದೆ! ಈ ಬಗ್ಗೆ ಆಡಳಿತಕ್ಕೆ ದೂರುಗಳು ಬರುತ್ತವೆ. ಪಾಪ ಏನೂ ಮಾಡದ ಪರಿಸ್ಥಿತಿಯಲ್ಲಿ ಆಡಳಿತವಿದೆ.